ಕರ್ನಾಟಕ ಸರ್ಕಾರ

ಲೋಕೋಪಯೋಗಿ ಇಲಾಖೆ,
ಕಾರ್ಯಪಾಲಕ ಇಂಜಿನಿಯರ್‌ರವರ ಕಛೇರಿ, ವಿಶೇಷ ವಿಭಾಗ, ನಜರ್‌ಬಾದ್, ಮೈಸೂರು.

E-mail:eepwdspecialmysuru@gmail.com  Phone No. & Fax No. 0821 2492297

---

ಸಂ.ಕಾಇಂ:ಲೋಇ:ವಿವಿ:ಮೈ:ತಾಂತ್ರಿಕ:ಶಿ.ಇಂ-1:ಕಟ್ಟಡ ಸುರಕ್ಷತೆ:2025-26  427-28 / 21/5/25  ದಿನಾಂಕ :

ರವರಿಗೆ

ಪ್ರಾಂಶುಪಾಲರು
ಡಿ ಪೌಲ್ ಪಬ್ಲಿಕ್ ಸ್ಕೂಲ್
30/1 ಸಾತಗಳ್ಳಿ, ಮಹಾದೇವಪುರ ರೋಡ್
ಮೈಸೂರು.

ಮಾನ್ಯರೇ,

ವಿಷಯ: ಮೈಸೂರು ನಗರದ ಡಿ ಪೌಲ್ ಪಬ್ಲಿಕ್ ಸ್ಕೂಲ್ 30/1 ಸಾತಗಳ್ಳಿ, ಮಹಾದೇವಪುರ ರೋಡ್, ಮೈಸೂರು ಶಾಲಾ ಕಟ್ಟಡಕ್ಕೆ ಕಟ್ಟಡದ ಸುರಕ್ಷತಾ ಪ್ರಮಾಣ ಪತ್ರವನ್ನು ನೀಡುವ ಬಗ್ಗೆ.

ಉಲ್ಲೇಖ:
1. ಸರ್ಕಾರದ ಅಪರ ಕಾರ್ಯದರ್ಶಿಗಳು, ಲೋಕೋಪಯೋಗಿ ಇಲಾಖೆ, ಕರ್ನಾಟಕ ಸರ್ಕಾರ, ಬೆಂಗಳೂರುರವರ ಸುತ್ತೋಲೆ ಸಂಖ್ಯೆ:ಲೋಇ:59:ಜಿಇಡಿ:2019 ದಿನಾಂಕ: 06.05.2022
2. ಸರ್ಕಾರದ ಅಪರ ಕಾರ್ಯದರ್ಶಿಗಳು, ಲೋಕೋಪಯೋಗಿ ಇಲಾಖೆ, ಕರ್ನಾಟಕ ಸರ್ಕಾರ, ಬೆಂಗಳೂರುರವರ ಸುತ್ತೋಲೆ ಸಂಖ್ಯೆ:ಲೋಇ:59:ಜಿಇಡಿ:2019 ದಿನಾಂಕ: 25.09.2024
3. ತಮ್ಮ ಮನವಿ ಪತ್ರ ದಿನಾಂಕ: 28.03.2025
4. BUILD POINT Construction and Technologies, ಗಂಗೋತ್ರಿ ಲೇಔಟ್, ಮೈಸೂರು ರವರಿಂದ ಕಟ್ಟಡವನ್ನು ಟೆಸ್ಟ್ ಮಾಡಿರುವ ಬಗ್ಗೆ ವರದಿ ದಿನಾಂಕ: 22.04.2025
5. ಸಹಾಯಕ ಕಾರ್ಯಪಾಲಕ ಇಂಜಿನಿಯರ್, ಲೋಕೋಪಯೋಗಿ ಇಲಾಖೆ, ನಂ.2 ಕಟ್ಟಡಗಳ ಉಪವಿಭಾಗ, ಮೈಸೂರು ಇವರ ಕಛೇರಿ ಪತ್ರ ಸಂಖ್ಯೆ: 150 ದಿ: 19.05.2025

•••

ಮೇಲಿನ ವಿಷಯಕ್ಕೆ ಸಂಬಂಧಿಸಿದಂತೆ, ಉಲ್ಲೇಖ(3)ರ ಪತ್ರದಲ್ಲಿ ತಾವು ಶಾಲಾ ಕಟ್ಟಡಕ್ಕೆ ಸುರಕ್ಷತಾ ಪ್ರಮಾಣ ಪತ್ರವನ್ನು ನೀಡುವಂತೆ ಕೋರಿರುತ್ತೀರಿ. ಮುಂದುವರೆದು ಮೈಸೂರಿನ ಡಿ ಪೌಲ್ ಪಬ್ಲಿಕ್ ಶಾಲಾ ಕಟ್ಟಡವನ್ನು ಸಹಾಯಕ ಕಾರ್ಯಪಾಲಕ ಇಂಜಿನಿಯರ್, ಲೋಕೋಪಯೋಗಿ ಇಲಾಖೆ, ನಂ.2 ಕಟ್ಟಡಗಳ ಉಪವಿಭಾಗ, ಮೈಸೂರುರವರು ದಿನಾಂಕ:13.05.2025 ರಂದು ಶಾಲೆಗೆ ಭೇಟಿ ನೀಡಿ ಪರಿಶೀಲಿಸಲಾಗಿದ್ದು, ಕಟ್ಟಡವು ಸುಸ್ಥಿತಿಯಲ್ಲಿರುವುದನ್ನು ಗಮನಿಸಲಾಗಿರುತ್ತದೆ.

ಸದರಿ ಶಾಲಾ ಕಟ್ಟಡದಲ್ಲಿ ಶೌಚಾಲಯ ಮತ್ತು ಕುಡಿಯುವ ನೀರಿನ ವ್ಯವಸ್ಥೆ ಕಲ್ಪಿಸಲಾಗಿರುತ್ತದೆ ಎಂದು ಉಲ್ಲೇಖ(5)ರ ಪತ್ರದಲ್ಲಿ ಸಹಾಯಕ ಕಾರ್ಯಪಾಲಕ ಇಂಜಿನಿಯರ್, ಲೋಕೋಪಯೋಗಿ ಇಲಾಖೆ, ನಂ.2 ಕಟ್ಟಡಗಳ ಉಪವಿಭಾಗ, ಮೈಸೂರು ರವರು ಸದರಿ ಶಾಲಾ ಕಟ್ಟಡದ ಸುರಕ್ಷತೆಗೆ ಸಂಬಂಧಿಸಿದಂತೆ ವಿವರಗಳನ್ನು ನಿಗದಿತ ನಮೂನೆಯಲ್ಲಿ ಈ ಕೆಳಕಂಡ ಮಾಹಿತಿಯನ್ನು ಸಲ್ಲಿಸುತ್ತಾ, ಕೆಲವು ಷರತ್ತುಗಳೊಂದಿಗೆ ಕಟ್ಟಡದ ಸುರಕ್ಷಿತ ಪ್ರಮಾಣ ಪತ್ರವನ್ನು ನೀಡಲು ಶಿಫಾರಸ್ಸು ಮಾಡಿರುತ್ತಾರೆ.

1. ಶಾಲೆಯು ನೆಲ ಅಂತಸ್ತು, ಒಂದನೇ ಅಂತಸ್ತು ಮತ್ತು ಎರಡನೇ ಅಂತಸ್ತು ಒಳಗೊಂಡಿದ್ದು, ಆರ್.ಸಿ.ಸಿ ಸ್ಲ್ಯಾಬ್ ಹಾಗೂ ಬೀಮ್ ಗಳಿಂದ ನಿರ್ಮಿತವಾಗಿರುವ Framed Structure ನಿಂದ ಕೂಡಿರುವ ಕಟ್ಟಡವಾಗಿರುತ್ತದೆ.
2. ಕಟ್ಟಡವನ್ನು 2010ನೇ ವರ್ಷದಲ್ಲಿ ಪೂರ್ಣಗೊಳಿಸಿರುವುದಾಗಿ ತಿಳಿಸಿದ್ದು, ಅದಕ್ಕೆ ಸಂಬಂಧಪಟ್ಟಂತೆ AFFIDAVIT ನೀಡಿರುತ್ತೀರಿ.
3. ಅಗ್ನಿಶಾಮಕ ಉಪಕರಣಗಳು ಶಾಲೆಯ ಪರಿಮಿತಿಯಲ್ಲಿ ಕಂಡು ಬಂದಿರುತ್ತದೆ.
4. ಸದರಿ ಶಾಲೆಯಲ್ಲಿ ಒಟ್ಟು 45 ತರಗತಿ ಕೊಠಡಿಗಳಿರುತ್ತವೆ. ನರ್ಸರಿಯಿಂದ 10ನೇ ತರಗತಿಯವರೆಗೆ ಶಾಲೆಯನ್ನು ನಡೆಸುತ್ತಿರುತ್ತಾರೆ.
5. ಈ ಶಾಲೆಯಲ್ಲಿ ವಿದ್ಯಾರ್ಥಿಗಳ ಉಪಯೋಗಕ್ಕಾಗಿ 20 ಸಂಖ್ಯೆಯ ಶೌಚಾಲಯಗಳನ್ನು ನಿರ್ಮಾಣ ಮಾಡಿರುತ್ತಾರೆ. ಶಾಲಾ ಸಿಬ್ಬಂದಿಗಳಿಗೆ ಪ್ರತ್ಯೇಕ ಶೌಚಾಲಯದ ವ್ಯವಸ್ಥೆ ಇರುತ್ತದೆ.

ಮು.ಪು.ನೋ.,

PRINCIPAL
DE PAUL PUBLIC SCHOOL
# 30/1, Sathagalli Extension
Mahadevapura Main Road
MYSURU-570 029

ಮುಂದುವರೆದು BUILD POINT Construction and Technologies, ಗಂಗೋತ್ರಿ ಲೇಔಟ್, ಮೈಸೂರು ರವರಿಂದ ಕಟ್ಟಡದ ಸುರಕ್ಷತೆಗೆ ಸಂಬಂಧಿಸಿದಂತೆ, ಸದರಿ ಕಟ್ಟಡದ Ultrasonic Pulse Velocity Test and Rebound Hammer Test ಮಾಡಿ ಉಲ್ಲೇಖ(4)ರ ಪತ್ರದಲ್ಲಿ ವರದಿಯನ್ನು ನೀಡಿರುತ್ತಾರೆ. ಸದರಿ ಪರೀಕ್ಷೆಯಲ್ಲಿ ಕಟ್ಟಡವು ಉತ್ತಮ ಗುಣಮಟ್ಟದಿಂದ ಕೂಡಿರುವುದು ಕಂಡು ಬಂದಿರುತ್ತದೆ.

**ಶಾಲಾ ಆಡಳಿತ ಮಂಡಳಿಯು ಪಾಲಿಸಬೇಕಾದ ಕ್ರಮಗಳು:-**

1. ಸದರಿ ಶಾಲೆಗಳ ಕಟ್ಟಡವನ್ನು ಸೂಕ್ತ ದುರಸ್ತಿಗಳೊಂದಿಗೆ ನಿರ್ವಹಣೆ ಮಾಡಲು ಸೂಚಿಸಿದೆ.
2. ಸದರಿ ಶಾಲೆಯ ಆಡಳಿತ ಮಂಡಳಿಯವರು ಅಗ್ನಿಶಾಮಕ ಇಲಾಖೆಯಿಂದ ನಿರಾಕ್ಷೇಪಣಾ ಪತ್ರ ಪಡೆದಿದ್ದು, ಅಗ್ನಿಶಾಮಕ ಇಲಾಖೆಯವರು ಸೂಚಿಸಿರುವ ಉಪಕರಣಗಳನ್ನು ಈಗಾಗಲೇ ಅಳವಡಿಸಿದ್ದು, ಕಟ್ಟಡದಲ್ಲಿ ಅಗ್ನಿಅವಗಡಗಳು ಸಂಭವಿಸಿದಾಗ ತೆಗೆದುಕೊಳ್ಳಬೇಕಾದ ಮುನ್ನೆಚ್ಚರಿಕೆಯ ಕ್ರಮಗಳ ಬಗ್ಗೆ ಶಾಲಾ ಸಿಬ್ಬಂದಿಗಳು ಹಾಗೂ ವಿದ್ಯಾರ್ಥಿಗಳಿಗೆ ತರಬೇತಿ ನೀಡಲು ಸೂಚಿಸಿದೆ.
3. **ಸದರಿ ಶಾಲೆಯ ಛಾವಣಿ ಮೇಲೆ ಶೇಖರಣೆಯಾಗುವ ಕಸ ಕಡ್ಡಿಗಳನ್ನು ಕಾಲ ಕಾಲಕ್ಕೆ ಶುಚಿಗೊಳಿಸಲು ಸೂಚಿಸಿದೆ.** ನೀರಿನ Spout ಗಳನ್ನು ಶುಚಿಯಾಗಿಡಲು ಸೂಚಿಸಿದೆ.
4. ಸದರಿ ಶಾಲಾ ಕಟ್ಟಡದ ಆವರಣದಲ್ಲಿ ಸುರಕ್ಷಿತ ನಿಯಮಗಳನ್ನು ಅಳವಡಿಸಲು ಸೂಚಿಸಿದೆ.
5. ಮುಂದುವರೆದು ಸದರಿ ಸುರಕ್ಷತಾ ಪ್ರಮಾಣ ಪತ್ರದ ಅವಧಿಯಲ್ಲಿ, ಶಾಲೆಯ ತರಗತಿಗಳನ್ನು ವಿಸ್ತರಿಸಿದರೆ ಪುನಃ ಸುರಕ್ಷತಾ ಪ್ರಮಾಣ ಪತ್ರವನ್ನು ಪಡೆಯಲು ಸೂಚಿಸಿದೆ. ಶಾಲೆಯ ಕಟ್ಟಡದ ಮೇಲಂತಸ್ತಿನಲ್ಲಿ ಬದಲಾವಣೆಗಳನ್ನು ತರಲು ಬಯಸಿದರೆ ಮಕ್ಕಳ ಹಿತ ದೃಷ್ಟಿಯಿಂದ ತಾಂತ್ರಿಕ ಸಲಹೆ ಪಡೆದು ಮುಂದುವರೆಯಲು ಸೂಚಿಸಲಾಗಿದೆ.
6. ಶಾಲಾ ಪರಿಮಿತಿಯನ್ನು ಶುಚಿಯಾಗಿ ಇಡುವುದು, ಶೌಚಾಲಯಗಳನ್ನು ಸ್ವಚ್ಛವಾಗಿ ಇಡುವುದು ಮತ್ತು ಮಳೆಯ ಸಂದರ್ಭಗಳಲ್ಲಿ ಛಾವಣಿಯಿಂದ ನೀರು ಸೋರದಂತೆ ಕ್ರಮ ವಹಿಸುವಂತೆ ತಿಳಿಸಿದೆ.
7. ಎರಡು ವರ್ಷಗಳಿಗೊಮ್ಮೆ ಅಗ್ನಿಶಾಮಕ ಇಲಾಖೆಯಿಂದ ನಿರಾಕ್ಷೇಪಣಾ ಪತ್ರವನ್ನು ಪಡೆಯಲು ತಿಳಿಸಿದೆ.

ಪ್ರಾಂಶುಪಾಲರು, ಡಿ ಪೌಲ್ ಪಬ್ಲಿಕ್ ಸ್ಕೂಲ್ 30/1 ಸಾತಗಳ್ಳಿ, ಮಹಾದೇವಪುರ ರೋಡ್, ಮೈಸೂರುರವರು ಕರ್ನಾಟಕ ಸರ್ಕಾರದ ಅಧೀನ ಕಾರ್ಯದರ್ಶಿ, ಪ್ರಾಥಮಿಕ ಶಿಕ್ಷಣ ಇಲಾಖೆರವರ ಸುತ್ತೋಲೆ ಸಂಖ್ಯೆ:ಇಡಿ:43:ಪಿಜಿಸಿ:2022 ದಿನಾಂಕ: 18.05.2022 ಆದೇಶದಂತೆ ನಗರ ಪ್ರದೇಶದ ಶಾಲೆ/ಕಾಲೇಜು ಕಟ್ಟಡಗಳಿಗೆ ರೂ.5,000/- ಮತ್ತು ಜಿ.ಎಸ್.ಟಿ ಶುಲ್ಕ 900/- ಗಳನ್ನು ದಿನಾಂಕ:21.05.2025 ರಂದು ದಿ ಸೌತ್ ಇಂಡಿಯಾ ಬ್ಯಾಂಕ್ ಲಿಮಿಟೆಡ್, ಎನ್.ಆರ್.ಮೊಹಲ್ಲಾ ಶಾಖೆ, ಮೈಸೂರು, ಡಿ.ಡಿ.ಸಂಖ್ಯೆ:782944 & 782942 ರಲ್ಲಿ ಪಾವತಿಸಿರುತ್ತಾರೆ. ಸದರಿ ಸಂಸ್ಥೆಯವರು ನೀಡಿರುವ ಎಲ್ಲಾ ದಾಖಲೆಗಳನ್ನು ಪರಿಶೀಲಿಸಲಾಗಿ BUILD POINT Construction and Technologies, ಗಂಗೋತ್ರಿ ಲೇಔಟ್, ಮೈಸೂರು ರವರು ಕಟ್ಟಡವು ರಚನಾತ್ಮಕವಾಗಿ ಸುರಕ್ಷಿತವಾಗಿದೆಯೆಂದು ನೀಡಿರುವ ಪ್ರಮಾಣ ಪತ್ರವನ್ನು ಪರಿಗಣಿಸಿ, ಹಾಗೂ ಕಟ್ಟಡವನ್ನು ಲೋಕೋಪಯೋಗಿ ಇಲಾಖೆಯ ತಾಂತ್ರಿಕ ತಂಡದವರು ಪರಿಶೀಲಿಸಲಾಗಿ ಕಟ್ಟಡವು "Structurally Stable" ಇರುವುದಾಗಿ ಪರೀಕ್ಷಾ ವರದಿಗಳಿಂದ ಕಂಡು ಬಂದಿರುತ್ತದೆ. ಅಗ್ನಿ ನಿರೋಧಕಕ್ಕೆ ಸಂಬಂಧಿಸಿದಂತೆ <u>Fire Safety Compliance Certificate</u> ಅನ್ನು ದಿನಾಂಕ:08.11.2024 ರಂದು Office of the District Fire Officer, Mysuru ರವರಿಂದ ನೀಡಲಾಗಿರುತ್ತದೆ ಹಾಗೂ ಅಂಗವಿಕಲ ವಿದ್ಯಾರ್ಥಿಗಳಿಗೆ ಶೌಚಾಲಯದ ವ್ಯವಸ್ಥೆಯನ್ನು ಕಲ್ಪಿಸಿ ಕೊಡಬೇಕೆಂಬ ಷರತ್ತಿನೊಂದಿಗೆ ಸದರಿ ಕಟ್ಟಡಕ್ಕೆ 05 ವರ್ಷಗಳ ಕಾಲಾವಧಿಗೆ ಅಂದರೆ 2025-26 ರಿಂದ 2029-30 ನೇ ಸಾಲಿನವರೆಗೆ ಕಟ್ಟಡದ ಸುರಕ್ಷತಾ ಪ್ರಮಾಣ ಪತ್ರವನ್ನು ನೀಡಲಾಗಿದೆ.

ತಮ್ಮ ವಿಶ್ವಾಸಿ,

ಕಾರ್ಯಪಾಲಕ ಅಭಿಯಂತರರು
ಲೋಕೋಪಯೋಗಿ ಇಲಾಖೆ
ವಿಶೇಷ ವಿಭಾಗ, ಮೈಸೂರು.

PRINCIPAL
DE PAUL PUBLIC SCHOOL
# 30/1, Sathagalli Extension
Mahadevapura Main Road
MYSURU-570 029